ಶ್ರೀ ಬಿ. ವಿ. ಕಕ್ಕಿಲಾಯ.—ಈ ವಾತಾವರಣ ಕಲುಷಿತವಾಗುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಲು ಎರಡು ಸಮಿತಿಗಳನ್ನು ರಚನೆ ಮಾಡಿಸ್ಪೀಪೆ ಎಂದು ತಿಳಿಸಿದಿರಿ. ಆ ಸಮಿತಿಯಲ್ಲಿ ಕಾರ್ಖಾನೆಗಳಲ್ಲಿರುವ ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನು ಸೇರಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.— ಈ ಒಂದು ಕಮಿಟಿಯಲ್ಲಿ ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನು ಸೇರಿಸೋಣ.

ಶ್ರೀ ಎಸ್. ಬಂಗಾರಪ್ಪ —ಏರ್ ಪಲ್ಯೂಷನ್ ವಿಷಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರವಾದ ಸಿಂಗಪೂರ್‌ನವರು ಕೈಗೊಂಡಿರುವ ಕಾರ್ಯಕ್ರಮದ ಬಗ್ಗೆ ಒಂದು ಆರ್ಟಿಕಲನ್ನು ಬರೆದಿದ್ದೇನೆ. ಅಲ್ಲಿ ಅವರು ಒಂದು ಕಾನೂನನ್ನು ತಂದಿದ್ದಾರೆ. ಎಲ್ಲ ಕೆಟ್ಟ ಹೊಗೆ ಬಿಡುವ ಎಂಜೀನ್‌ಗಳು ಇವೆಯೋ ಅವುಗಳನ್ನು ರಸ್ತೆ ಪಕ್ಕದಲ್ಲಿ ಕಂಡವ್ ಮಾಡಿ ನಿಲ್ಲಿಸಬೇಕು ಎಂದು ಮಾಡಿದ್ದಾರೆ. ಇಂಥ ಒಂದು ಅಧಿಕಾರವನ್ನು ಪೋಲೀಸರಿಗೆ ಕೊಟ್ಟು 70-80 ಪರ್ಸೆಂಟ್ ವಾಹನಗಳು ಬಿಡುವ ಕೆಟ್ಟ ಗಾಳಿಯನ್ನು ಕಡಿಮೆ ಮಾಡಿದ್ದಾರೆ. ತಾವೂ ಸಹ ಈ ರೀತಿ ಇಲ್ಲಿ ಕಾನೂನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.— ಇದು ಬಹಳ ದೊಡ್ಡ ಪ್ರಶ್ನೆ ಈ ರೀತಿ ಮಾಡಲಿಕ್ಕೆ ವಾಹನಗಳ ಪರಿಸ್ಥಿತಿ ಏನು ಇದೆ ಎಂದು ತಿಳಿದುಕೊಂಡು ಮಾಡಬೇಕು ಮತ್ತು ಅದರ ಮೇಲೆ ವಿಷಯವನ್ನು ಅವಲೋಕಿಸಿ ಸಮಗ್ರವಾಗಿ ನೋಡಬೇಕಾದರೆ ಕೇಂದ್ರದ ಆಕ್ಟ್ ಆಗಬೇಕಾಗುತ್ತದೆ.

Electrification of Villages in Jamkhandi Taluk

698. Sri P. M. BANGI (Jamkhandi).—

Will the Minister for Public Works and Electricity be pleased state :—

(*a*) whether it is a fact that there are only nine villages in Jamkhandi taluk to be electrified ;

(*b*) whether it is a fact that the department is awaiting sanction from the Government for supplying the said villages with electricity ;

(*c*) if so, the reasons for the delay in the matter ?

Sri H. M. CHANNABASAPPA (Minister for Public Works and Electricity).—

(*a*) No.

(*b*) Nine of the un-electrified villages have been recently proposed by the Board for inclusion in the next years' programme which is being finalised in consultation with the Board.

(*c*) Does not arise in view of reply to clause (*b*) above.

ಶ್ರೀ ಪಿ. ಎಂ. ಬಂಗಿ.—ಜಮಖಂಡಿ ತಾಲ್ಲೂಕಿನ 9 ಹಳ್ಳಿಗಳ ಬಗ್ಗೆ ವಿದ್ಯುಚ್ಛಕ್ತಿ ಮಂಡಲ ಯವರು ಶಿಫಾರಸ್ ಮಾಡಿರುವುದು ನಿಜವೇ ಎಂದು ಕೇಳಿರುವುದಕ್ಕೆ ನಿಜವಲ್ಲ ಎಂದು ಹೇಳಿದ್ದೀರಿ. ಆ 9 ಹಳ್ಳಿಗಳ ಹೆಸರು ಏನು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಹಳ್ಳಿಗಳ ಹೆಸರು ನನ್ನ ಮುಂದೆ ಇಲ್ಲ.

ಶ್ರೀ ಪಿ. ಎಂ. ಬಂಗಿ.—ಆ 9 ಹಳ್ಳಿಗಳ ಹೊರತಾಗಿ ಮತ್ತೆ ಎಷ್ಟು ಹಳ್ಳಿಗಳು ಜಮಖಂಡಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕಾಗಿ ಉಳಿದಿರುತ್ತವೆ ಅವುಗಳ ಸಂಖ್ಯೆಯನ್ನು ಹೇಳಬಹುದೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಟ್ಟು 64 ಹಳ್ಳಿಗಳಲ್ಲಿ 48 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗಿದೆ.ಇನ್ನೂ 16 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿದೆ. ಇದರಲ್ಲಿ ಈ ವರ್ಷದಲ್ಲಿ ಕೊಡಬೇಕಾದ್ದು ಏನಿದೆ ಅದನ್ನು ಸೇರಿಸಿಕೊಂಡಿದ್ದೇವೆ. ಈ ಹಳ್ಳಿಗಳು ಮುಂದೆ ಪ್ರಪೋಸ್ಡ್ ಟು ಬಿ ಇನ್‌ಕ್ಲೂಡೆಡ್ ಇವನ್ನು ಮುಂದೆ ಪರಿಶೀಲನೆ ಮಾಡುತ್ತೇವೆ.

ಶ್ರೀ ದೊಡ್ಡ ತಿಮ್ಮಯ್ಯ.—ತಾವು ವರ್ಷದಲ್ಲಿ ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ನಿಗದಿ ಮಾಡಿಕೊಂಡಿರುತ್ತೀರಿ ? ಕೆಲವು ಕಡೆ ಹಳ್ಳಿಗಳನ್ನು ಕೇಳುವವರೇ ಇಲ್ಲ, ಅದಕ್ಕೋಸ್ಕರವಾಗಿ ಡಿಸ್ಟ್ರಿಕ್ ಲೆವೆಲ್‌ನಲ್ಲಿ ಒಂದು ಯೂಸರ್ಸ್ ಕನ್‌ಸಲ್ಟೆಟೀವ್ ಕಮಿಟಿ ಅಥವಾ ಅಡ್ವೈಸರಿ ಕಮಿಟಿ ಮಾಡುವ ಯೋಜನೆಯನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಮಿಟಿಯವರು ಶಿಫಾರಸ್ ಮಾಡಿಕೊಟ್ಟರೆ ವಿದ್ಯುಚ್ಛಕ್ತಿಯನ್ನು ಕೊಡುವುದಿಕ್ಕಾಗುವುದಿಲ್ಲ. ವಿದ್ಯುಚ್ಛಕ್ತಿಯನ್ನು ಕೊಡಬೇಕಾದರೆ, ಪಂಚಾಯಿತಿಯ ಗ್ರಾಮಸ್ಥರು ಏನೇನು ಕಾರ್ಯಕ್ರಮವನ್ನು ಅನುಸರಿಸಬೇಕು ಎನ್ನುವ ವಿಧೇಯಕ ಇದೆ. ಆ ವಿಧೇಯಕದ ಪ್ರಕಾರ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ. ಈಗ ಸುಮಾರು 1.60 ಲಕ್ಷ ರೂಪಾಯಿಗಳ ಮೆಚ್ಚಡದಲ್ಲಿ ಸ್ಪೆಷರ್ ಟ್ರಾನ್ಸ್‌ಮಿಷನ್ ಲೈನ್ ಅನ್ನು ಡ್ರಾ ಮಾಡಬೇಕು ಎಂದು ಇದೆ, ಆಗ ಹೆಚ್ಚು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಮಂಜೂರಾತಿಯನ್ನು ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಇಂದೋ, ನಾಳೆಯೋ ಅಥವಾ ನಾಡಿದ್ದೋ ಆಚ್ಚೆಯಾದ ಮೇಲೆ ಯಾವ ಯಾವ ಊರಿನ ಹತ್ತಿರ ಲೈನ್ ಹೋಗುತ್ತದೆಯೋ ಅಂಥ ಕಡೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಜಮಖಂಡಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಕೊಡದೆ ಇರುವ ಗ್ರಾಮಗಳಲ್ಲಿ ತೊಂದರೆಯಾಗಿದೆ. ಅಲ್ಲಿಯ ನೇಕಾರರಿಂದ ವಿದ್ಯುಚ್ಛಕ್ತಿಯನ್ನು ಬಳಸಲಿಕ್ಕೆ ಬೇಡಿಕೆ ಬಂದರೆ, ಅದನ್ನು ಪರಿಶೀಲನೆ ಮಾಡಿಕೊಡುವದಕ್ಕಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೀವ್ರವಾದ ಕ್ರಮಗಳನ್ನು ಅನುಸರಿಸಿ, ತೀವ್ರವಾದ ಬೇಡಿಕೆಗಳು ಬಂದರೆ, ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

Bangalore-Madras Train *via*, K.G.F.

660. **Sri K. M. DORAISWAMY NAIDU** (Bethamangala).—

Will the Minister for Public Works and Electricity be pleased to state :—

(*a*) whether the Government has recommended to the Central Government to deviate the Bangalore-Madras Train *via* K.G.F. instead of Kamasamudram to facilitate the passengers who travel from K.G.F. to Bangalore and Madras ;

(*b*) if not, whether they would recommend to the Central Government to divert the above said Train *via* K.G.F. ?

Sri H. M. CHANNABASAPPA (Minister for Public Works and Electricity).—

(*a*) No.

(*b*) This will be examined.